ಆಗಿದೆ. ಈಗ ಅದು ವಾಪಸ್ಸು ಹೋಗಿರುವುದರಿಂದ ಹೆಚ್ಚಾಗಿ ಹಣ ಕೊಡದೇ ಇರುವುದರಿಂದ ಪೋಲಿಸ್‌ನವರೇ ನಿರ್ಧಾರ ಮಾಡಿದ್ದಾರೆ. ಅವರ ವೆಲ್‌ಫೇರ್ ಫಂಡ್‌ನಿಂದ ಕೊಡಬೇಕು ಎಂದು ಹೇಳಿ ಈಗಾಗಲೇ ಚಿಕ್ಕಮಗಳೂರು, ಕಾರವಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಪೋಲಿಸ್ ಕಲ್ಯಾಣ ನಿಧಿಯಿಂದ ಸುಮಾರು ಹನ್ನೊಂದು ಲಕ್ಷ ರೂಪಾಯಿ ಹೆಚ್ಚು ಹಣವನ್ನು ಪೂಲ್ ಮಾಡಿ ಅದನ್ನು ಕೊಡಬೇಕು ಎಂದು ನಿರ್ಧಾರ ಮಾಡಿದ್ದಾರೆ. ಬಹುಶಃ ಇನ್ನು ಐದಾರು ತಿಂಗಳುಗಳಲ್ಲಿ ಈ ಕೆಲಸ ಮುಕ್ತಾಯವಾಗಬಹುದು.

ಶ್ರೀ ಯೋಗೇಶ್ ಭಟ್:- ಅನುದಾನ ಸಿಗಲ್ಲವೇ ಇದಕ್ಕೆ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಈಗ ಅನುದಾನಕ್ಕಿಂತ ಅವರಿಗೇ ಏನಾದರು ಹೆಚ್ಚು ಹಣದ ಅವಶ್ಯಕತೆ ಬಿದ್ದರೆ ನಾವು ಕೊಡುತ್ತೇವೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನಂಬರ್ 2137 ನನಗೆ ಬರುವುದಿಲ್ಲ. ಫಯರ್ ಫೋರ್ಸ್‌ಗೆ ಬರುತ್ತದೆ. ಇದು ಫಯರ್ ಫೋರ್ಸ್‌ಗೆ ಟ್ರಾನ್ಸ್‌ಫರ್ ಆಗಿದೆ.

ಅಧ್ಯಕ್ಷರು :- ನಿಮ್ಮದು ಮತ್ತು ಸಗೀರ್ ಅಹಮದ್‌ರವರ ಪ್ರಶ್ನೆ ಏನಾಗಿದೆ ಎಂದರೆ ಅವರು ಊರಲ್ಲಿ ಇಲ್ಲ. ಅವರು ನನ್ನ ಅನುಮತಿ ಪಡೆದು ಹೋಗಿದ್ದಾರೆ. ಇನ್ನೊಂದು ದಿವಸ ತೆಗೆದುಕೊಳ್ಳೋಣ.

ವಿಷಯ:- ಅನಧಿಕೃತ ಸಾರಾಯಿ ಅಂಗಡಿಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 222 (1803)

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):- ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು?

ಆ)ರಾಜ್ಯದಲ್ಲಿ ಮದ್ಯದ ಸೆಕೆಂಡ್ಸ್‌ಗಳ ಮಾರಾಟವನ್ನು ನಿಲ್ಲಿಸಲಾಗಿದೆಯೇ?

ಇ)ನಿಲ್ಲಿಸಲಾಗದಿದ್ದರೆ ಅದನ್ನು ನಿಲ್ಲಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ತಿಪ್ಪೆಸ್ವಾಮಿ (ಅಬಕಾರಿ ಸಚಿವರು):-

ಅ)ಯಾವುದೂ ಇಲ್ಲ

ಆ) ಅಬಕಾರಿ ತೆರಿಗೆ ರಹಿತ ಮದ್ಯದ ಮಾರಾಟವನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಇ) ತೆರಿಗೆ ರಹಿತ ಮದ್ಯದ ಮಾರಾಟವನ್ನು ನಿಲ್ಲಿಸಲು ತೆಗೆದುಕೊಂಡಿರುವ ಕ್ರಮವನ್ನು ಅನುಬಂಧದಲ್ಲಿ ನೀಡಿದೆ.

ANNEXURE-I

Year	Opening Balance	Cases Booked	Acquitted by the Courts	Convicted by the Court	Departmentally disposed under Section 45 & 45 A	Unclaimed & Time barred Cases.
1	2	3	4	5	6	7
1994-95	12620	13638	2129	46	10370	421

Total disposal	Balance	Raids conducted	Cases booked	persons arresred	Vehicles seized
8	9	10	11	12	13
12966	13292	46259	13638	4289	661

IML	Beer/ Toddy/ Fenny.	R.S/N.S	Arrack	I.D.Liquors destroyed.
14	15	16	17	18
938143	284007	6,61,490	2,95,678	21,03,956

ಶ್ರೀ ಎ.ಟಿ. ರಾಮಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೇ, ಬಹಳ ಸತ್ಯಕ್ಕೆ ದೂರವಾದ ಮಾಹಿತಿಯನ್ನು ಒದಗಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು ಎಂದರೆ ಯಾವುದೇ ಇಲ್ಲ ಎಂದು ಹೇಳಿದ್ದಾರೆ. ದಿನಾಂಕ 22.8.1995ರಂದು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 519ರಲ್ಲಿ ಉತ್ತರ ಕೊಡುತ್ತಾ ಅನಧಿಕೃತ ಸಾರಾಯಿ ಅಂಗಡಿಗಳು ಇದ್ದಾವೆ ಎಂದು ಹೇಳಿ ಈ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಇವೊತ್ತು ಉತ್ತರ ಹೇಳುತ್ತಿದ್ದಾರೆ ಯಾವುದು ಇಲ್ಲ ಎಂದು. ಈ ರೀತಿಯಾದ ತಪ್ಪು ಮಾಹಿತಿಯನ್ನು ಅಸತ್ಯವಾದ ವಿಚಾರವನ್ನು ಈ ಸದನಕ್ಕೆ ಸರ್ಕಾರ ಕೊಡುತ್ತಿದೆ ಎಂದು ಅನಿವಾರ್ಯವಾಗಿ ತಮ್ಮ ಮೂಲಕ ಹೇಳಬೇಕಾಗುತ್ತದೆ. ಮತ್ತು ರಾಜ್ಯದಲ್ಲಿ ಮದ್ಯದ ಸೆಕೆಂಡ್ಸ್ ಮಾರಾಟ ನಿಲ್ಲಿಸಲಾಗುವುದೇ ಎಂದು ಕೇಳಿದರೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ನಿಲ್ಲಿಸಿದ್ದಾರೊ ಅಥವಾ ಇಲ್ಲವೋ ಎಂದು ಸ್ಪಷ್ಟವಾದ ಉತ್ತರವನ್ನು ಅವರು ಹೇಳಬೇಕು. ಮತ್ತೆ ನಿಲ್ಲಿಸಲಾಗದಿದ್ದರೆ ಅದನ್ನು ನಿಲ್ಲಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳು ಏನು ಎಂದರೆ ಅದಕ್ಕೆ ಹದಿಮೂರು ಸಾವಿರ ಚಿಲ್ಲರೆ ಕೇಸ್‌ಗಳನ್ನು ನಾವು ರಿಜಿಸ್ಟರ್ ಮಾಡಿದ್ದೇವೆ ಅದರಲ್ಲಿ ಕೇವಲ ನಾಲ್ಕು ಸಾವಿರದ ಎರಡನೂರಾ ಎಂಬತ್ತೊಂಭತ್ತು ಜನರನ್ನು ಅರೆಸ್ಟ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಬಾಕಿ ಮೊಕದ್ದಮೆಗಳಲ್ಲಿರತಕ್ಕ ಜನರನ್ನು ಏತಕ್ಕೆ ಅರೆಸ್ಟ್ ಮಾಡಲಿಲ್ಲ? ಇಲಾಖೆ ಅಥವಾ ಸರ್ಕಾರ ಅವರ ಜೊತೆ ಹೊಂದಿಕೊಂಡು ಏನಾದರೂ ಕೆಲಸ ಮಾಡುತ್ತಿದೆಯೋ ಎನ್ನುವಂಥ ಮಾಹಿತಿ ಕೊಡಬೇಕು.

ಶ್ರೀ ವೈಜನಾಥ ಪಾಟೀಲ್: ಎಷ್ಟು ಜನರು ಅನಧಿಕೃತವಾಗಿ ಶಾಪ್‌ಗಳನ್ನು ತೆಗೆದಿದ್ದಾರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಮತ್ತೆ ಹೊಸ ಕೇಸ್‌ಗಳು ಏನಾದರೂ ತಮ್ಮ ಗಮನಕ್ಕೆ ಬಂದಿದ್ದರೆ, ಸರ್ಕಾರದ ಗಮನಕ್ಕೆ ತಂದರೆ ಅವರ ವಿರುದ್ಧ ಕೂಡ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎ.ಟಿ. ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷರೇ, ಉತ್ತರ ಸಮಂಜಸವಾಗಿ ಆಗಲಿಲ್ಲ. ಇವೊತ್ತು ಅನಧಿಕೃತ ಸಾರಾಯಿ ಅಂಗಡಿಗಳು ಯಾವುದೂ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಮೊನ್ನೆ ದಿನಾಂಕ 22.8.1995ರಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳು ಇದ್ದಾವೆ ಎಂದು ಉತ್ತರ ಕೊಟ್ಟಿದ್ದಾರೆ. ತಪ್ಪು ಮಾಹಿತಿಯನ್ನು ಸದನಕ್ಕೆ ಏಕೆ ಕೊಡುತ್ತಾರೆ.? ಹಾಗಾದರೆ ಯಾವುದೇ ಅನಧಿಕೃತ ಸಾರಾಯಿ ಅಂಗಡಿಗಳು ಇಲ್ಲವೇ? ಇದ್ದಾವೊ ಅಥವಾ ಇಲ್ಲವೋ ಎಂದು ಸ್ಪಷ್ಟವಾಗಿ ಹೇಳಿ.

ಶ್ರೀ ವೈಜನಾಥ ಪಾಟೀಲ್: ಸರ್ಕಾರದ ಗಮನಕ್ಕೆ ಯಾವುದು ಬಂದಿದೆ ಅದರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಮತ್ತೆ ಯಾವುದಾದರೂ ಇದ್ದರೆ ಸರ್ಕಾರದ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಟಿ.ರಾಮಸ್ವಾಮಿ: ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ ಅಧ್ಯಕ್ಷರೇ, ಅನಧಿಕೃತ ಸಾರಾಯಿ ಅಂಗಡಿಗಳು ಈ ರಾಜ್ಯದಲ್ಲಿ ಇದ್ದಾವೊ ಅಥವಾ ಇಲ್ಲವೊ?

ಶ್ರೀ ವೈಜನಾಥ ಪಾಟೀಲ್: ಇದ್ದವರ ವಿರುದ್ಧ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎ.ಟಿ.ರಾಮಸ್ವಾಮಿ: ಇದ್ದಾವೊ ಅಥವಾ ಇಲ್ಲವೋ ಅಂತ ಹೇಳಿ.

ಶ್ರೀ ವೈಜನಾಥ ಪಾಟೀಲ್: ಈಗ ಯಾವುದೂ ಇಲ್ಲ.

ಶ್ರೀ ಎ.ಟಿ. ರಾಮಸ್ವಾಮಿ: ನೀವೇ ಈ ಸದನದಲ್ಲಿ ದಿನಾಂಕ 22.8.1995 ರಲ್ಲಿ ಚುಕ್ಕೆ ಗುರುತಿನ ಪ್ರಶ್ನೆಗೆ ಅನಧಿಕೃತ ಸಾರಾಯಿ ಅಂಗಡಿಗಳು ಇದ್ದಾವೆ ಎಂದು ಉತ್ತರ ಕೊಟ್ಟಿದ್ದೀರಿ.

ಅಧ್ಯಕ್ಷರು: ರಾಮಸ್ವಾಮಿಯವರೇ ಯಾವುದೇ ಸರ್ಕಾರ ಅನಧಿಕೃತವಾಗಿ ಸಾರಾಯಿ ಅಂಗಡಿಗಳು ಇದ್ದಾವೆ ಎಂದು ಹೇಳುವುದಿಲ್ಲ. ಅನಧಿಕೃತವಾಗಿ ಮಾಹಿತಿ ತಮಗೆ ಇದ್ದಲ್ಲಿ ಅದನ್ನು ಸರ್ಕಾರದ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎ.ಟಿ.ರಾಮಸ್ವಾಮಿ: ಚುಕ್ಕೆ ಗುರುತಿನ ಪ್ರಶ್ನೆಗೆ ಹೇಗೆ ಉತ್ತರ ಕೊಟ್ಟಿದ್ದಾರೆ.?

ಅಧ್ಯಕ್ಷರು: ಆವೊತ್ತು ಉತ್ತರ ಕೊಟ್ಟಾಗ ಇತ್ತೆಂದು ಕಾಣುತ್ತದೆ. ಈಗ ಉತ್ತರ ಕೊಡುವಾಗ ಇಲ್ಲವೆಂದು ಅನಿಸುತ್ತದೆ.

ಶ್ರೀ ಎ.ಟಿ.ರಾಮಸ್ವಾಮಿ: ಸೆಕೆಂಡ್ಸ್ ಮಾರಾಟದ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಸೆಕೆಂಡ್ಸ್ ಮಾರಾಟ ಈ ರಾಜ್ಯದಲ್ಲಿ ಇದೆಯೋ ಅಥವ ಇಲ್ಲವೋ?

11.40 ಎ.ಎಂ

ಅಂದರೆ ಸೆಕೆಂಡ್ಸ್ ಮಾರಾಟ ಇದೆಯೆಂದು ಹೇಳಿದ ಹಾಗಾಯ್ತು. ಇದ್ದರೆ ಸರ್ಕಾರ ಏಕೆ ಕಣ್ಣು ಮುಚ್ಚಿಕೊಂಡಿದೆ. ಸರ್ಕಾರ ಸೆಕೆಂಡ್ಸ್ ಮಾರಾಟ ಮಾಡುವವರ ಜೊತೆ ಶಾಮೀಲಾಗಿದೆಯೇ ಇದ್ದರೂ ಏಕೆ ಕಣ್ಣು ಮುಚ್ಚಿಕೊಂಡಿದ್ದಾರೆ.?

ಶ್ರಿ ವೈಜನಾಥ ಪಾಟೀಲ್:- ಎಲ್ಲೆಲ್ಲಿ ಸರ್ಕಾರದ ಗಮನಕ್ಕೆ ಈ ವಿಚಾರ ಬಂದಿದೆ, ಅಂಥವರ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ಈ ಬಗ್ಗೆ ಸಂಖ್ಯೆಯನ್ನು ತಮಗೆ ಕೊಟ್ಟಿದೆ. ಇಂಥ ಕೇಸುಗಳು ಮತ್ತೆ ಏನಾದರೂ ಇದ್ದರೆ, ಅವುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅಂಥವರ ವಿರುದ್ಧ ಕೂಡ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೇ, ಕಣ್ಣು ಮೂಗು ಮುಚ್ಚಿಕೊಂಡು ಸರ್ಕಾರ ಈ ರೀತಿ ಉತ್ತರ ಕೊಟ್ಟರೆ ನಾವು ಇಲ್ಲಿ ಕುಳಿತುಕೊಂಡು ಕೇಳುವುದಕ್ಕೆ ಆಗುತ್ತದೆಯೇ?

ಅಧ್ಯಕ್ಷರು:- ಎಲ್ಲರಿಗೂ ತೊಂದರೆಯಾಗುವಂಥ ಪ್ರಶ್ನೆಗಳನ್ನು ಏಕೆ ಕೇಳುತ್ತೀರಿ? ಸೆಕೆಂಡ್ಸ್ ಇದೆ, ಥರ್ಡ್ಸ್ ಕೂಡ ಇದೆ.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಸದಸ್ಯರು ಕೇಳುತ್ತಿರುವ ಪ್ರಶ್ನೆಗೆ ಒಂದು ಸ್ಪಷ್ಟೀಕರಣ. ಸಾರಾಯಿ ಅಂಗಡಿಯೇ ಬೇರೆ ಐ.ಎಂ.ಎಫ್.ಎಲ್ ಶಾಪ್ಸೇ ಬೇರೆ. ಕೆಲವು ಅನ್‌ಲೈಸೆನ್ಸ್‌ಡ್ ಐ.ಎಂ.ಎಫ್.ಎಲ್ ಶಾಪ್ಸ್ ಇರಬಹುದು. ಆದರೆ ಅನ್‌ಲೈಸೆನ್ಸ್‌ಡ್ ಆರ್ಯಾಕ್ ಶಾಪ್ಸ್ ಇರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ರಾಮಸ್ವಾಮಿಯವರೇ, ಆರ್ಯಾಕ್ ಶಾಪ್ಸೇ ಬೇರೆ, ಐ.ಎಂ.ಎಫ್.ಎಲ್ ನಿಂದ ಸಾರಾಯಿಯನ್ನು, ಮದ್ಯವನ್ನು ಮಾರತಕ್ಕಂಥ ಅಂಗಡಿಗಳು ಬೇರೆ. ಆದ್ದರಿಂದ ಅನ್‌ಲೈಸೆನ್ಸ್‌ಡ್ ಆರಾಕ್ ಶಾಪ್ಸ್ ಇರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಸಾಗರ ತಾಲ್ಲೂಕಿದಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳು ಇವೆ.

ಅಧ್ಯಕ್ಷರು:-ಇದ್ದರೆ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬನ್ನಿ. ಅದನ್ನು ತೆಗೆದು ಹಾಕುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಮುಖ್ಯಮಂತ್ರಿಗಳು ಬಿಜಾಪುರಕ್ಕೆ ಹೋಗಿ ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಮಹಿಳೆಯರು ತಮ್ಮ ಅಳಲನ್ನು ತೋಡಿಕೊಂಡರು. ಸ್ವಾಮಿ, ನಮಗೆ ಏನೂ ಬೇಡ, ಸಾರಾಯಿ ಅಂಗಡಿಯನ್ನು ತಪ್ಪಿಸಿ ಎಂದು ಕೇಳಿಕೊಂಡಾಗ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟು ಬಂದರು. ಅದಕ್ಕೋಸ್ಕರ ನಾವು ಮಂತ್ರಿಗಳನ್ನು ಕೇಳುತ್ತಿದ್ದೇವೆ. ಸಾಧ್ಯವಾದರೆ, ಮಹಿಳೆಯರು ಇರತಕ್ಕಂಥ ಕ್ಷೇತ್ರಗಳು ಏನಿವೆ ಅಲ್ಲ ಸಾರಾಯಿ

ಅಂಗಡಿಗಳನ್ನು ಮುಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತೀರೋ. ನಾವೆಲ್ಲಾ ಇದರ ಬಗ್ಗೆ ಈಗಾಗಲೇ ಅಹವಾಲನ್ನು ಕೊಟ್ಟಿದ್ದೇವೆ, ಧರಣಿಯನ್ನು ಮಾಡಿದ್ದೇವೆ, ಇದನ್ನು ಮುಚ್ಚಿಸಿ ಎಂದು ಕೇಳಿದ್ದೇವೆ. ಆದರೂ ಕೂಡ ಇನ್ನೂ ಮುಚ್ಚಿಸಿಲ್ಲ. ದಯವಿಟ್ಟು ಮಹಿಳಾ ಕ್ಷೇತ್ರಗಳಲ್ಲಿಯಾದರೂ ದಯವಿಟ್ಟು ಇದನ್ನು ಮುಚ್ಚಿಸುವ ಕಾರ್ಯಕ್ರಮವನ್ನು ಮಾಡುತ್ತಿರೋ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು:- ಇಲ್ಲಾ ಬಿಡಿ, ನೀವು ಇರುವ ಕಡೆಗಳಲ್ಲಿ ನಾವು ಗಂಡಸರು ಇದ್ದೇವೆ, ಆದುದರಿಂದ ಇದನ್ನು ಬಿಟ್ಟುಬಿಡಿ.

ಶ್ರೀ ಜೆ.ಹೆಚ್. ಪಟೀಲ್:- ಸರ್ಕಾರ ಈ ಬಗ್ಗೆ ಈಗಾಗಲೇ ತನ್ನ ನಿಲುವನ್ನು.....

ಶ್ರೀ ಎಲ್.ಆರ್.ಶಿವರಾಮೇಗೌಡ:- ಬಹಳಷ್ಟು ಕಡೆ ಹೆಂಗಸರೇ ಕುಡಿಯುತ್ತಿದ್ದಾರೆ. ಅದಕ್ಕೆ ಏನು ಮಾಡುವುದು?

ಶ್ರೀ ಜೆ.ಹೆಚ್.ಪಟೀಲ್:- ಸಾರಾಯಿ ಮಾರಾಟವನ್ನು ಬರುವ ವರ್ಷದಿಂದ ಸಾಧ್ಯವಾದಷ್ಟು ನಿಲ್ಲಿಸುತ್ತಾ ಹೋಗುತ್ತೇವೆ ಎಂದು ಹೇಳಿದ್ದಾರೆ. ಹೆಂಗಸರು ಇರುವ ಕಡೆ ಇದನ್ನು ಮಾಡುತ್ತೇವೆ, ಹೆಂಗಸರು ಇಲ್ಲದೇ ಇರುವ ಕಡೆ ಇದನ್ನು ಮಾಡುತ್ತೇವೆ ಎಂದು ಹೇಳಿಲ್ಲ. ಆದರೆ ಮಾನ್ಯ ಸದಸ್ಯೆಯವರು ಹೇಳುವ ಪ್ರಕಾರ ಇದು ಹೆಣ್ಣು ಮಕ್ಕಳ ಒತ್ತಾಯದಿಂದ ಜಾರಿಗೆ ಬರಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ನಾವು ಒತ್ತಾಯ ಮಾಡುತ್ತೇವೆ. ಇಲ್ಲಿರತಕ್ಕಂಥ 7 ಜನ ಮಹಿಳೆಯರೂ ಇದನ್ನು ಒತ್ತಾಯ ಮಾಡುತ್ತೇವೆ. ಮಹಿಳಾ ಪ್ರತಿನಿಧಿಗಳಾಗಿ ನಾವು ಇವೊತ್ತಿನ ದಿವಸ ನಿಮ್ಮಲ್ಲಿ ಒತ್ತಾಯ ಮಾಡುತ್ತಿದ್ದೇವೆ. ತಾವು ಇದನ್ನು ನಿಲ್ಲಿಸುತ್ತೀರಾ ಎನ್ನತಕ್ಕಂಥದ್ದನ್ನು ಕೇಳುತ್ತಿದ್ದೇವೆ ಏಕೆಂದರೆ...

ಶ್ರೀ ಜೆ.ಹೆಚ್ ಪಟೀಲ್:- ಮಾಡುತ್ತೇವೆ.

ಅಧ್ಯಕ್ಷರು:- ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನದೊಂದು ಪ್ರಶ್ನೆ. ದಯವಿಟ್ಟು ಈ ವರ್ಷವಾದರೂ ಇನ್ನೂ ಬೇರೆ ಕಡೆಗಳಲ್ಲಿ ಲೈಸೆನ್ಸ್ ಕೊಡುವುದಿಲ್ಲವೆಂದು ಹೇಳುತ್ತೀರಾ? ಈಗ ನನ್ನ ಕ್ಷೇತ್ರದಲ್ಲಿ ಎರಡು ಕಡೆ ಹೊಸದಾಗಿ ಕೊಟ್ಟಿದ್ದಾರೆ.

ಶ್ರೀ ಜೆ.ಹೆಚ್.ಪಟೀಲ್:- ತಾವು ಹೇಳಿದ್ದುದು ಮಹಿಳೆಯರ ಕ್ಷೇತ್ರದಲ್ಲಿ ಮೊದಲು ನಿಲ್ಲಿಸಿ ಎಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ನಿಲ್ಲಿಸಲಿಕ್ಕಾಗದಿದ್ದರೂ. in a phased manner. ಹಂತಹಂತವಾಗಿ ಕೊಡಬಾರದಷ್ಟು, ಕಳೆದ ಎರಡು ತಿಂಗಳಲ್ಲಿ ಹೊಸದಾಗಿ ಲೈಸನ್ಸ್‌ಗಳನ್ನು ಕೊಟ್ಟಿದ್ದಾರೆ.

ಶ್ರೀ ಜೆ.ಹೆಚ್.ಪಟೀಲ್:- ಅಧ್ಯಕ್ಷರೇ, ಮಹಿಳೆಯರ ಕ್ಷೇತ್ರವೆಂದು ಹೇಳಿ ರಿಸರ್ವ್ ಮಾಡಿದ್ದಾರೆ ಅಲ್ಲಿ ಬಿಟ್ಟು ಎಂದು ಹೇಳಿದರು, ಅದು ಆ ರೀತಿಯಲ್ಲಿ...

ಶ್ರೀ ಎಂ.ಸಿದ್ದಲಿಂಗಸ್ವಾಮಿ:- ಮಹಿಳೆಯರ ಕ್ಷೇತ್ರ ಎಂದು ಎಲ್ಲಿದೆ?

ಶ್ರೀ ಜೆ.ಹೆಚ್.ಪಟೀಲ್:- ಇಲ್ಲಿ ಇಲ್ಲಿ ಎಲ್ಲಿದೆ ಮಹಿಳೆಯರ ಕ್ಷೇತ್ರ ಎಂದು ಹೇಳಿದೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಹಿಳೆಯರ ಕ್ಷೇತ್ರ ಎಂದು ತಾವೇ ಹೇಳುತ್ತಿದ್ದೀರಲ್ಲಾ.

ಶ್ರೀ ಎಂ.ಸಿದ್ದಲಿಂಗಸ್ವಾಮಿ:- ತಾವು ಬುದ್ಧಿವಂತರು.

ಶ್ರೀ ಹೆಚ್.ಎನ್.ನಾಗೇಗೌಡ:- ನೀವು ಹೇಳಿದ್ದು ಮಹಿಳೆಯರ ಕ್ಷೇತ್ರದಲ್ಲಿ ನಿಲ್ಲಿಸಬೇಕು ಎಂದರೆ...

ಶ್ರೀ ಜೆ.ಹೆಚ್.ಪಟೇಲ್:- ಅಲ್ಲಾ, ಅದನ್ನು ಅವರು ಕೇಳಿದ್ದುದು

ಅಧ್ಯಕ್ಷರು:-ಬೇಡಾ ಬಿಡಿ, ವಾಟಾಳ್‌ರು ಏನೋ ಕೇಳುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಜಿಲ್ಲಾ ಪಂಚಾಯತಿಗಳಲ್ಲಿ ಮಹಿಳೆಯರ ಕ್ಷೇತ್ರಗಳನ್ನು 30 ಪರ್ಸೆಂಟ್ ಇದೆ ಎಂದು ಮಾಡಿದಿರಿ.

ಶ್ರೀ ವಾಟಾಳ್ ನಾಗರಾಜ್:- ಪ್ರಮೀಳಾರವರು ಒಂದು ಪ್ರಶ್ನೆ ಹಾಕಿದರು, ಅದನ್ನು ಕೇಳಿ ನನಗೆ ಬಹಳ ಗಾಬರಿಯಾಯಿತು. ಮಹಿಳೆಯರು ಇಲ್ಲದೇ ಇರತಕ್ಕಂಥ ಸ್ಥಳಗಳು ಯಾವುವು ಸ್ವಾಮಿ?

ಅಧ್ಯಕ್ಷರು:- ಯಾವುವೂ ಇಲ್ಲ

ಶ್ರೀ ವಾಟಾಳ್ ನಾಗರಾಜ್:- ಆ ಸ್ಥಳಗಳಲ್ಲಿಯಾದರೂ ಸಾರಾಯಿ ಮಾರಾಟವನ್ನು ನಿಲ್ಲಿಸಿ ಎಂದು ಹೇಳಿದರು.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಖಂಡಿತವಾಗಿ ನಾನು ಹಾಗೆ ಹೇಳಲಿಲ್ಲ, ನಿಮಗೆಲ್ಲೋ ಸ್ವಲ್ಪ ಕಿವಿ ಸರಿಯಿಲ್ಲ ಎಂದು ಅನ್ನಿಸುತ್ತದೆ. ನಾನು ಹೇಳಿದ್ದುದು ಮಹಿಳೆಯರು ಪ್ರತಿನಿಧಿಸತಕ್ಕಂಥ ಕ್ಷೇತ್ರಗಳಲ್ಲಿ ಎಂದು ಹೇಳಿದ್ದೇನೆ. ಅರ್ಥ ಆಗದೇ ಇದ್ದರೆ ದಯವಿಟ್ಟು ತಿಳಿದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್:- ಅಂದರೆ ನಿಮ್ಮ ಅರ್ಥ ಮಹಿಳೆಯರು ಪ್ರತಿನಿಧಿಸತಕ್ಕಂಥ ಕ್ಷೇತ್ರಗಳಲ್ಲಿ ಗಂಡಸರು ಇಲ್ಲವೋ? ಮಹಿಳೆಯರು ಪ್ರತಿನಿಧಿಸತಕ್ಕಂಥ ಕ್ಷೇತ್ರಗಳಲ್ಲಿ ಪುರುಷರು ಇಲ್ಲವೇ? ಸಭಾಧ್ಯಕ್ಷರೇ ತಾವು ಇದಕ್ಕೆ ತೀರ್ಪು ಕೊಡಬೇಕು.

ಅಧ್ಯಕ್ಷರು:-ಅವರೂ ನಾವೂ ಎಲ್ಲಾ ಕಡೆ ಒಟ್ಟಿಗೇ ಇರುವುದು.

ಶ್ರೀ ಬಿ.ರಾಮನಾಥ ರೈ:- ಮಹಿಳೆಯರು ಪ್ರತಿನಿಧಿಸದ ಕ್ಷೇತ್ರದ ಮಹಿಳೆಯರು ಏನು ತಪ್ಪು ಮಾಡಿದ್ದಾರೆ. ಮಹಿಳೆಯರು ಪ್ರತಿನಿಧಿಸತಕ್ಕಂಥ ಕ್ಷೇತ್ರಗಳಲ್ಲಿ ಅದನ್ನು ನಿಲ್ಲಿಸಬೇಕಾದರೆ, ಉಳಿದ ಭಾಗಗಳಲ್ಲಿರುವ ಮಹಿಳೆಯರು ಏನು ತಪ್ಪು ಮಾಡಿದ್ದಾರೆ.

ಡಾ॥ ಯು.ಚಿತ್ತರಂಜನ್:-ಒಬ್ಬ ವ್ಯಕ್ತಿ 750 ಎಂ.ಎಲ್‌ನಿಂದ ಹಿಡಿದು 100 ಸಾಕೆಟ್ಸ್ ತೆಗೆದುಕೊಂಡು ಹೋಗಬಹುದು ಎಂದು ಈಗ ಕಾನೂನಿನಲ್ಲಿದೆ. ಈ ಸಂದರ್ಭದಲ್ಲಿ ರಸ್ತೆ, ಫುಟ್‌ಪಾತ್‌ಗಳಲ್ಲಿ ಬೇಕಾದರೂ ಮಾರಾಟ ಮಾಡಬಹುದು. ಆ ಕಾನೂನಿನ ಬಗ್ಗೆ ದಯವಿಟ್ಟು Under the protection of this provision of law, they are carrying them.

ಅಧ್ಯಕ್ಷರು:- ಅದು ಮಾರಾಟ ಮಾಡುವುದಲ್ಲ, ಕುಡಿಯುವ ಹವ್ಯಾಸವಿರುವವರು ಅಷ್ಟು ಪ್ರಮಾಣದಷ್ಟನ್ನು ತನ್ನ ವಶದಲ್ಲಿ ಇಟ್ಟುಕೊಳ್ಳಬಹುದು.

ಡಾ॥ ಯು.ಚಿತ್ತರಂಜನ್:- ಹಾಗಾದರೆ ಕಾನೂನನ್ನು ಹೇಗೆ ಜಾರಿ ಮಾಡುತ್ತೀರಿ? ಒಬ್ಬ ಏಳೂವರೇ ಲೀಟರ್‌ನ್ನು ಹಿಡಿದುಕೊಂಡು ಹೋಗುವವನಿಗೆ, ನಾವು ಪರವಾನಿಗಿ ಕೊಟ್ಟರೆ ಅವನು ಮಾರಾಟ ಮಾಡುತ್ತಾನೋ ಅಥವಾ ಇಲ್ಲವೋ ಎಂದು ಹೇಗೆ ಗೊತ್ತಾಗುತ್ತದೆ? I would like to draw the attention of the Government to the provisions of this law under the Act.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್:- ಮಹಿಳೆಯರು ಎನ್ನದೇ ಇದನ್ನು ನಮ್ಮ ಸರ್ಕಾರ ನಿಲ್ಲಿಸಬೇಕು ಎಂಬುದಕ್ಕೆ ಹೊರಟಿರುವುದೇ ಶುಭ ಸೂಚನೆಯಾಗಿದೆ. ಮಹಿಳೆಯರೋ, ಮಹನೀಯರೊ ಅಂತೂ ಒಟ್ಟಿನಲ್ಲಿ ಸಾರಾಯಿ ನಿಲ್ಲಬೇಕು. ಅದರ ಬಗ್ಗೆ ಈಗಾಗಲೇ ನಮ್ಮ ಸರ್ಕಾರದ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಇದನ್ನು ಹಂತ ಹಂತವಾಗಿ ಮುಂದಿನ ವರ್ಷದಿಂದ ನಿಲ್ಲಿಸುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ. ಇದರಲ್ಲಿ ಮಹಿಳೆಯರು, ಮಹನೀಯರು ಎಂಬ ಪ್ರಶ್ನೆ ಇಲ್ಲ. ಇವೊತ್ತು ಸಾರಾಯಿ ಮಾರಾಟ ಆಗತಕ್ಕಂಥದ್ದನ್ನು ಮತ್ತು ಅದನ್ನು ಕುಡಿಯತಕ್ಕಂಥದ್ದನ್ನು ನಿಲ್ಲಿಸಬೇಕು, ಇದು ಬಹಳ ಮುಖ್ಯವಾದುದು.

ಅಧ್ಯಕ್ಷರು:-ಕುಡಿಯುವವರೆಲ್ಲಾ ಕುಡುಕರು, ಇದರಲ್ಲಿ ಮಹಿಳೆಯರು, ಮೆಹನೀಯರು ಎಂದಿಲ್ಲ.

ವಿಷಯ:-ಮುಖ್ಯಮಂತ್ರಿಗಳ ಜನತಾದರ್ಶನ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ -223 (1902)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ)ಇತ್ತೀಚೆಗೆ ರಾಜ್ಯದ ಮುಖ್ಯಮಂತ್ರಿಗಳು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜನತಾ ದರ್ಶನವನ್ನು ಕೈಗೊಂಡಿರುವುದು ನಿಜವಲ್ಲವೇ.

ಆ)ಹಾಗಿದ್ದಲ್ಲಿ ಜನತಾ ದರ್ಶನದ ಸಮಯದಲ್ಲಿ ಮುಖ್ಯಮಂತ್ರಿಗಳಿಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಇ) ಬಂದಿರುವ ಅರ್ಜಿಗಳ ಪೈಕಿ ಇದುವರೆಗೂ ವಿಲೇವಾರಿ ಮಾಡಲಾದ ಅರ್ಜಿಗಳ ಸಂಖ್ಯೆ ಎಷ್ಟು

ಈ)ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕೈಗೊಂಡಿರುವ ಕ್ರಮಗಳೇನು?

ಉ) ಈ ಪ್ರವಾಸದ ಸಮಯದಲ್ಲಿ ಸರ್ಕಾರದ ಬೊಕ್ಕಸಕ್ಕೆ ಖರ್ಚಾದ ಹಣವೆಷ್ಟು?

ಊ)ಈ ಪ್ರವಾಸದ ಸಮಯದಲ್ಲಿ ಎಷ್ಟು ಭಾರಿ ಹೆಲಿಕ್ಯಾಪ್ಟರ್ ಉಪಯೋಗಸಲಾಯಿತು ಮತ್ತು ಅದರ ನಿರ್ವಹಣೆಗಾಗಿ ಖರ್ಚಾದ ಹಣವೆಷ್ಟು?

ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):-

ಅ) ಮುಖ್ಯಮಂತ್ರಿಗಳು ಇದುವರೆಗೂ 16 ಜಿಲ್ಲೆಗಳಲ್ಲಿ ಜನತಾದರ್ಶನ ಕಾರ್ಯಕ್ರಮಗಳನ್ನು ಕೈಗೊಂಡು ಮುಗಿಸಿದ್ದಾರೆ.

ಆ) 18,932 ಅರ್ಜಿಗಳು

ಜಿಲ್ಲೆ	ಒಟ್ಟು ಅರ್ಜಿಗಳು
ಮೈಸೂರು	944
ಕೊಡಗು	306
ಹಾಸನ	1306
ಚಿಕ್ಕಮಗಳೂರು	779
ಶಿವಮೊಗ್ಗ	921